ಪ್ರ=72= 07
13/12/2024

(3)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನಾ ಸಿದ್ದಿ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ**

**ಸೂಚನೆ:-**

ದಿನಾಂಕ 27-04-1978 ಪೂರ್ವದ ಅರಣ್ಯ ಅತಿಕ್ರಮಣ ಸಕ್ರಮಗೊಳಿಸಲು ಸರಕಾರವು ಸ್ಪಷ್ಟ ಮಾರ್ಗಸೂಚಿ ಹೊರಡಿಸಿದ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 1832 ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳು ಸಕ್ರಮ ಆದೇಶ ಹೊರಡಿಸಿದ್ದು ಇರುತ್ತದೆ.

ಹೀಗೆ ಸಕ್ರಮಗೊಳಿಸಿದ ಪ್ರಕರಣಗಳಲ್ಲಿ ಅತಿಕ್ರಮಣ ಜಮೀನು, ಅರಣ್ಯ ಕಾಯ್ದೆ 1962 ಕಲಂ 28 ರಡಿ disforest donatory ಆಗದೆ ಇರುವುದರಿಂದ ಪಹಣಿ ಪತ್ರಿಕೆಯಲ್ಲಿ ಮಂಜೂರಿದಾರರ ಹೆಸರಿಗೆ ಬದಲಾಗಿ ಈವರೆಗೆ ಅರಣ್ಯ ಇಲಾಖೆಯ ಹೆಸರೇ ಮುಂದುವರೆದಿರುತ್ತದೆ. ಇದರಿಂದ ಮಂಜೂರಿದಾರರು ಸರಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ರೈತರ ಸಮಸ್ಯೆಯನ್ನು ನಿವಾರಿಸುವ ದೃಷ್ಟಿಯಿಂದ ಹೀಗೆ disforest donatory ಆಗದೆ ಇರುವ ಪ್ರಕರಣಗಳಲ್ಲಿ ಸರ್ಕಾರ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಕ್ರಮಬದ್ಧಗೊಳಿಸುವ ಬಗ್ಗೆ.

**ಉತ್ತರ:-**

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ, ಕೆನರಾ ವೃತ್ತ ವ್ಯಾಪ್ತಿಯಲ್ಲಿ ಬರುವ ವಿಭಾಗಗಳಲ್ಲಿ 1978ರ ಪೂರ್ವದ ಒಟ್ಟು 4820 ಅರಣ್ಯ ಒತ್ತುವರಿ ಪ್ರಕರಣಗಳಲ್ಲಿ 4590 ಪ್ರಕರಣಗಳನ್ನು ಭಾರತ ಸರ್ಕಾರವು ಅನುಮೋದನೆಗೊಳಿಸಿರುತ್ತದೆ. ಅವುಗಳಲ್ಲಿ 2499 ಪ್ರಕರಣಗಳು ಜಿಲ್ಲಾಧಿಕಾರಿಗಳ ಸಮಿತಿಯಿಂದ ಕ್ರಮಬದ್ಧಗೊಂಡಿವೆ ಹಾಗೂ 1298 ಪ್ರಕರಣಗಳು ತಿರಸ್ಕೃತಗೊಂಡಿರುತ್ತವೆ. ಜಿಲ್ಲಾಧಿಕಾರಿಯವರ ಸಮಿತಿಯಿಂದ ಕ್ರಮಬದ್ಧಗೊಂಡ 2499 ಪ್ರಕರಣಗಳಲ್ಲಿ 1404 ಡಿ-ನೋಟಿಫಿಕೇಶನ್ ಪ್ರಸ್ತಾವನೆಗಳನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಧಾರವಾಡ ರವರ ಕಛೇರಿಗೆ ಕಳುಹಿಸಿದ್ದು, ಈ ಪೈಕಿ 747 ಪ್ರಸ್ತಾವನೆಗಳನ್ನು ಅರಣ್ಯ ಸಂರಕ್ಷಣಾಧಿಕಾರಿಗಳು ಕಾರ್ಯಯೋಜನೆ, ಧಾರವಾಡರವರ ಕಚೇರಿಯಿಂದ ಸಂಬಂಧಪಟ್ಟ ವಿಭಾಗಗಳಿಗೆ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸಿ ಮರು ಸಲ್ಲಿಸುವಂತೆ ಹಿಂದಿರುಗಿಸಿದ್ದು, ಪ್ರಕ್ರಿಯೆ ಅರಣ್ಯ ಇಲಾಖೆಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.

ಡಿ-ನೋಟಿಫಿಕೇಶನ್ ಪ್ರಸ್ತಾವನೆಗಳನ್ನು ನಿರ್ವನೀಕರಣಗೊಳಿಸುವ (disforest) ಪ್ರಕ್ರಿಯೆ ಚಾಲ್ತಿಯಲ್ಲಿರುವ ಕಾರಣದಿಂದ ರೈತರ ಪಹಣಿ ಪತ್ರಿಕೆಯಲ್ಲಿ ಮಂಜೂರಿದಾರರ ಹೆಸರಿನ ಬದಲಾಗಿ ಈವರೆಗೂ ಅರಣ್ಯ ಇಲಾಖೆಯ ಹೆಸರೇ ಮುಂದುವರೆದಿರುತ್ತದೆ. ಪ್ರಸ್ತುತ ಸರ್ಕಾರದಿಂದ ಮತ್ತು ಜಿಲ್ಲಾಧಿಕಾರಿಯವರ ಸಮಿತಿಯಿಂದ ಅಂಗೀಕೃತವಾದ 1978ರ ಪೂರ್ವದ ಅರಣ್ಯ ಒತ್ತುವರಿ ಪ್ರಕರಣಗಳನ್ನು ಕರ್ನಾಟಕ ಅರಣ್ಯ ಅಧಿನಿಯಮ, 1963ರ ಸೆಕ್ಷನ್ 28 ರಂತೆ ಡಿ-ನೋಟಿಫಿಕೇಶನ್ ಮಾಡಲು ಪರಿಹಾರಾತ್ಮಕವಾಗಿ (Compansatory Afforestation) ಜಿಲ್ಲೆಯಲ್ಲಿ 2499 ಪ್ರಕರಣಗಳಿಗೆ 1293.253 ಹೆಕ್ಟೇರ್ ಪರ್ಯಾಯ ಭೂಮಿಯ ಅವಶ್ಯಕತೆಯಿರುತ್ತದೆ. ಪರ್ಯಾಯ ಭೂಮಿಯನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.

**(ಕಡತ ಸಂಖ್ಯೆ: ಕಂಇ 28 ಎಲ್‌ಜಿಎನ್ 2024)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು